ಪ್ರಾಥಮಿಕ ಮತ್ತು ಪ್ರೌಢಶಾಲೆಗಳು

805 (782) ಶ್ರೀ ಸಂಪಂಗಿ (ಬಾಗೇಪಲ್ಲಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳಿಗಾಗಿ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಸಹಯೋಗದೊಂದಿಗೆ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ, ಇದರಿಂದ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲಿ ಪ್ರಯೋಜನವಾಗುತ್ತಿದೆ ಹಾಗೂ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಎಷ್ಟು ಅನುದಾನವನ್ನು ಪೂರೈಸುತ್ತಿದೆ; (ತಾಲ್ಲೂಕುವಾರು ವಿವರಗಳನ್ನು ನೀಡುವುದು);

ಆ) ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕುಗಳು ನಂಜುಂಡಪ್ಪ ವರದಿಯ ಪ್ರಕಾರ ಅತೀ ಹಿಂದುಗಳಿದ ಪ್ರೇಶಗಳೆಂದು ಸರ್ಕಾರದ ಗಮನಕ್ಕೆ ಇದೆಯೇ; ಈ ಯೋಜನೆಯಿಂದ ಎರಡೂ ತಾಲ್ಲೂಕುಗಳಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ತೆಗೆದುಕೊಳ್ಳಲಾಗಿದೆ; (ಪೂರ್ಣ ಮಾಹಿತಿ ನೀಡುವುದು);

ಇ) ಈ ಕ್ಷೇತ್ರದಲ್ಲಿ ಒಟ್ಟು ಪ್ರಾಥಮಿಕ ಹಾಗೂ ಪ್ರೌಢಶಾಲೆಗಳು ಮತ್ತು ಉರ್ದು (ಪ್ರಾಥಮಿಕ/ಪ್ರೌಢಶಾಲೆಗಳಿಗೆ) ಶಾಲೆಗಳಿಗೆ ಎಷ್ಟು ಸ್ವಂತ ಕಟ್ಟಡಗಳಿವೆ; ಎಷ್ಟು ಶಾಲೆಗಳಿಗೆ ಸ್ವಂತ ಕಟ್ಟಡಗಳಿವೆ; ಎಷ್ಟು ಶಾಲೆಗಳಿಗೆ ಸ್ವಂತ ಕಟ್ಟಡಗಳು ಇಲ್ಲ ಮತ್ತು ಅವುಗಳ ನಿರ್ಮಾಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ; (ಪೂರ್ಣ ಮಾಹಿತಿ ಒದಗಿಸುವುದು);

ಈ) ಈ ಕ್ಷೇತ್ರದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶೌಚಾಲಯಗಳು ಇಲ್ಲದ ಶಾಲೆಗಳೆಷ್ಟು ನಿರ್ಮಿಸದೇ ಇದ್ದಲ್ಲಿ ಇದಕ್ಕೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು;

ಉ) ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರಿಗೆ ಶಾಲೆಗಳಲ್ಲಿ ಶೌಚಾಲಯಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಇದಕ್ಕಾಗಿ ಮೀಸಲಿಟ್ಟ ಹಣವೆಷ್ಟು;

ಊ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಗುರುಭವನ ನಿರ್ಮಿಸಲು ಯಾವ ಕ್ರಮಕೈಗೊಳ್ಳಲಾಗಿದೆ; ಯಾವ ಸ್ಥಳದಲ್ಲಿ ಗುರುಭವನ ನಿರ್ಮಿಸಲಾಗುವುದು ಇದಕ್ಕೆ ಮೀಸಲಿಟ್ಟ ಹಣವೆಷ್ಟು;

ಋ) 8ನೇ ತರಗತಿ ವಿದ್ಯಾರ್ಥಿಗಳಿಗೆ ಇದೂವರೆವಿಗೂ ಸರ್ಕಾರ ದಿಂದ ನೀಡಲಾಗುತ್ತಿರುವ ಸೈಕಲ್ಲುಗಳ ಸಂಖ್ಯೆ ಎಷ್ಟು; ರಾಜ್ಯದಲ್ಲಿ ಇದೂವರೆವಿಗೂ ಎಲ್ಲಾ 8ನೇ ತರಗತಿಯ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಸೈಕಲುಗಳು ಎಷ್ಟು; ಇದರ ಒಟ್ಟು ಮೊತ್ತ ಎಷ್ಟು ಯಾವ ಯಾವ ಸಾಲಿನಲ್ಲಿ ಎಷ್ಟು ಸೈಕಲ್ಲುಗಳನ್ನು ವಿತರಿಸಲಾಗಿದೆ, ಅದರ ಒಟ್ಟು ಮೊತ್ತ ಎಷ್ಟು;

ಎ) 2008–09 ಮತ್ತು 10ನೇ ಸಾಲಿನಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ ಸೈಕಲ್ಲು ನೀಡಲಾಗಿದೆಯೇ, ನೀಡಿದ್ದರೇ, ಅದರ ಪೂರ್ಣ ವಿವರ ತಾಲ್ಲೂಕುವಾರು ನೀಡುವುದು;

ಏ) ನಂಜುಂಡಪ್ಪ ವರದಿಯ ಪ್ರಕಾರ ಅತೀ ಹಿಂದುಳಿದ ಪ್ರದೇಶ ಗಳಾದ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕುಗಳಲ್ಲಿ ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮಗಳನ್ನು ಪದವಿ ಪೂರ್ವ ವಿದ್ಯಾರ್ಥಿಗಳಿಗೆ ನೀಡಲಾ ಗುತ್ತಿದೆಯೇ, ಇಲ್ಲದಿದ್ದಲ್ಲಿ, ಸರ್ಕಾರವು ಯಾವ ಕ್ರಮ ತೆಗೆದುಕೊಳ್ಳಲಾಗಿದೆ;

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಬಾಗೇಪಲ್ಲಿ ತಾಲ್ಲೂಕು ಮಾತ್ರ ಅತೀ ಹಿಂದುಳಿದ ತಾಲ್ಲೂಕಾಗಿರುತ್ತದೆ. ವಿಶೇಷ ಅಭಿವೃದ್ಧಿ ಯೋಜನೆಯಡಿ 2008–09ನೇ ಸಾಲಿನಲ್ಲಿ 84 ಶಾಲೆಗಳಿಗೆ ಪೀಠೋಪಕರಣ/ ಕುಡಿಯುವ ನೀರು/ ಶೌಚಾಲಯ ಸೌಲಭ್ಯ ಒದಗಿಸಿಕೊಡಲು 78.20 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ.

2009–10ನೇ ಸಾಲಿನಲ್ಲಿ 5 ಶಾಲೆಗಳಿಗೆ 15.81 ಲಕ್ಷ ರೂ.ಗಳ ಅನುದಾನದಲ್ಲಿ ಶೌಚಾಲಯ ಕಟ್ಟಿಸಲಾಗಿದೆ.

ಕೇಂದ್ರ ಪುರಸ್ಕೃತ ಯೋಜನೆಗಳು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಅನುಷ್ಠಾನಗೊಳಿಸಲಾಗುತ್ತಿದೆ.

ಇ) ಬಾಗೇಪಲ್ಲಿ ಕ್ಷೇತ್ರದಲ್ಲಿ ಒಟ್ಟು 32 ಸರ್ಕಾರಿ ಪ್ರೌಢಶಾಲೆಗಳಿದ್ದು, 420 ಸರ್ಕಾರಿ ಪ್ರಾಥಮಿಕ ಶಾಲೆಗಳಿರುತ್ತದೆ.

2 ಸರ್ಕಾರಿ ಪ್ರಾಥಮಿಕ ಶಾಲೆಗಳನ್ನು ಹೊರತು ಪಡಿಸಿ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೂ ಸ್ವಂತ ಕಟ್ಟಡ ಒದಗಿಸಲಾಗಿದೆ.

ನಬಾರ್ಡ್ ಅನುದಾನದ ಆರ್.ಐ.ಡಿ.ಎಫ್. ಯೋಜನೆಯಡಿ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುತ್ತಿದೆ.

ಈ) ಈ ಕ್ಷೇತ್ರದ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಶೌಚಾಲಯ ಇರುತ್ತದೆ. 08 ಸರ್ಕಾರಿ ಪ್ರೌಢಶಾಲೆಗಳಿಗೆ ಶೌಚಾಲಯ ಇರುವುದಿಲ್ಲ. ಇದನ್ನು ಆರ್.ಎಂ.ಎಸ್.ಎ ಅಡಿ ನಿರ್ಮಿಸಲು ಕ್ರಮ ವಹಿಸಲಾಗುವುದು.

ಉ) ಬಂದಿದೆ.

ಟಿ.ಎಸ್.ಸಿ. ಮತ್ತು ಆರ್.ಎಂ.ಎಸ್.ಎ ಯೋಜನೆಗಳಡಿ ಶೌಚಾಲಯಗಳನ್ನು ನಿರ್ಮಿಸಲು ಹಾಗೂ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿಯೂ ಶೌಚಾಲಯಗಳನ್ನು ನಿರ್ಮಿಸಲು ಕ್ರಮವಹಿಸಲಾಗುವುದು.

ಊ) ಚಿಕ್ಕಬಳ್ಳಾಪುರ ಜಿಲ್ಲೆಯ ಕೇಂದ್ರ ಸ್ಥಾನದಲ್ಲಿ ಗುರುಭವನ ನಿರ್ಮಿಸಲು ಉದ್ದೇಶಿಸಿದೆ. ಇದಕ್ಕಾಗಿ ರಾಜ್ಯ ಸರ್ಕಾರವು ಯಾವುದೇ ಅನುದಾನವನ್ನು ನಿಗಧಿಪಡಿಸಿರುವುದಿಲ್ಲ. ಇದನ್ನು ಆಯಾ ಜಿಲ್ಲೆಯ ಶಿಕ್ಷಣ ಇಲಾಖೆಯ ಸಿಬ್ಬಂದಿ ವರ್ಗದವರು ನೀಡುವ ದೇಣಿಗೆ ಹಾಗೂ ಸ್ಥಳೀಯರು ನೀಡುವ ದೇಣಿಗೆಯಿಂದ ನಿರ್ಮಿಸಲಾಗುವುದು.

ಋ) ಜಿಲ್ಲೆಯಲ್ಲಿ 8ನೇ ತರಗತಿ ವಿದ್ಯಾರ್ಥಿಗಳಿಗೆ ಇದುವರೆವಿಗೂ ಸರ್ಕಾರದಿಂದ ನೀಡಲಾಗುತ್ತಿರುವ ಸೈಕಲ್ಲುಗಳ ವಿವರ ಈ ಕೆಳಕಂಡಂತಿದೆ.

ವರ್ಷ	ರಾಜ್ಯದಲ್ಲಿ ವಿತರಿಸಲಾದ ಒಟ್ಟು ಸೈಕಲ್ಲುಗಳ ಸಂಖ್ಯೆ	ಮೊತ್ತ (ಕೋಟಿ ಗಳಲ್ಲಿ)	ಜಿಲ್ಲೆಗಳಲ್ಲಿ ವಿತರಿಸಲಾದ ಒಟ್ಟು ಸೈಕಲ್‌ಗಳ ಸಂಖ್ಯೆ	ಮೊತ್ತ (ಕೋಟಿ ಗಳಲ್ಲಿ)
2006–07	420323	85.33	11625	23.59
2007–08	435000	89.18	12974	26.60
2008–09	666222	159.69	17328	41.53
2009–10	ಪ್ರಗತಿಯಲ್ಲಿದೆ			

ಎ) ತಾಲ್ಲೂಕುವಾರು ವಿವರ ಕೆಳಕಂಡಂತಿರುತ್ತದೆ :-

ಕ್ರ. ಸಂ.	ತಾಲ್ಲೂಕು	ಗಂಡು	ಹೆಣ್ಣು	ಒಟ್ಟು
1	ಬಾಗೇಪಲ್ಲಿ	1184	1260	2444
2	ಚಿಕ್ಕಬಳ್ಳಾಪುರ	1489	1430	2919
3	ಚಿಂತಾಮಣಿ	1590	1839	3429
4	ಗೌರಿಬಿದನೂರು	2415	2359	4774
5	ಗುಡಿಬಂಡೆ	506	504	1010
6	ಶಿಡ್ಲಘಟ್ಟ	1358	1394	2752
	ಒಟ್ಟು	**8542**	**8756**	**17328**

ಏ) ನೀಡುತ್ತಿಲ್ಲ. ನೀಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

ಎಲ್.ಎ. ಕ್ಯೂ. ಸಂಖ್ಯೆ: 782/2010ಕ್ಕೆ ಅನುಬಂಧ

(ರೂ.ಲಕ್ಷಗಳಲ್ಲಿ)

ಕ್ರ ಸಂ	ವಿವರ/ ಲೆಕ್ಕಶೀರ್ಷಿಕೆ	ಅಯ ಗಡ	ಖರ್ಚು	ಖರ್ಚೇ ಪಲ್ಲ	ಜಿಲ್ಲೆ ಪಲ್ಲಾಧಿಕಾರಿ	ಹಂಚಿಕೆ ಮಾಡಿ	ಗೊತ್ತಿರದ ಸೂಚಿ	ಗುರಿ ಖಂಡ	ಶಿಲ್ಪ ಶಬ್ದ
1.	ಅಕ್ಷರದಾಸೋಹ ಯೋಜನೆ (ಕೇಂದ್ರ ಅನುದಾನ) 2202-01-800-1-35	903.00	901.00	155.66	155.66	155.66	155.66	122.70	155.66
2.	ಸರ್ವ ಶಿಕ್ಷಣ ಅಭಯಾನ 2202-01-800-1-44	259.98	259.98	59.45	40.75	35.33	40.00	22.90	61.50
3.	ಗುತ್ತಿಗೆ ಆಧಾರದ ಶಿಕ್ಷಕರ ಸಂಭಾವನೆ 2202-01-800-1-49	1.98	1.291	0.00	0.665	0.453	0.00	0.173	0.00
4.	ನೇಪಥ್ಯ ಮತ್ತು ಮಾಪಾಣು(ಪ್ರೌಢ) 2202-02-109-0-77	19.98	19.98	2.96	2.96	4.45	5.19	1.48	2.94
5.	ಶುಲ್ಕ ಮರುಪಾವತಿ 2202-02-800-1-05	35.01	35.01	2.82	21.37	3.89	3.75	1.26	1.92
6.	ಪ್ರೌಶಾಕಟ್ಟಡ ನಿರ್ಮಾಣ (ಆರ್‌ಐಎಫ್-13/14) 2202-02-800-1-10	174.78	174.78	14.05	61.23	43.40	37.40	18.70	0.00
7.	ಸಾಮಗ್ರಿಗಳ ಸರಬರಾಜು 2202-80-800-0-51	15.00	15.00	2.25	2.25	3.25	3.75	1.25	2.25
8.	ನೇಪಥ್ಯ ಮತ್ತು ಮಾಪಾಣು(ಪ್ರಾ) 2202-01-101-0-75	13.00	13.00	1.92	1.82	2.65	3.20	1.41	2.00
9.	ಸರ್ವ ಶಿಕ್ಷಣ ಅಭಯಾನ (ಕೇಂದ್ರ ಅನುದಾನ)	2151.576	2151.576	397.882	276.888	407.465	342.006	165.109	344.060
	ಒಟ್ಟು	3574.306	3571.617	636.992	563.593	656.548	590.956	334.982	570.33
	ವಿಶೇಷ ಅಭಿವೃದ್ಧಿ ಯೋಜನೆ								
1.	4202-01-202-1-05	6.70	6.70	6.70	0.00	0.00	0.00	0.00	0.00
2.	2202-02-800-1-16	15.81	15.81	15.81	0.00	0.00	0.00	0.00	0.00
	ಒಟ್ಟು	22.51	22.51	22.51	0.00	0.00	0.00	0.00	0.00
	ಯೋಜನೇತರ								
1	ನಗರಪ್ರದೇಶದ ಪ್ರೌಶಾಲೆಗಳಿಗೆ 02 ಕೊಠಡಿಗಳ ನಿರ್ಮಾಣ 2202-01-053-01-132	6.70	6.70	0.00	6.70	0.00	0.00	0.00	0.00

ಕ್ರ ಸಂ	ವಿವರ/ ಲೆಕ್ಕಶೀರ್ಷಿಕೆ	ಪ್ರಮ ಗುರಿ	ಖರ್ಚು	ಜಾರಿ ವರ್ಷ	ಹಣ್ಣ ಬಜೆಟ್ಟಿನ	ಖಂಡಾ ಮತ್ತ	ಗೊಂದ ನೆಲು	ಗುರಿ ಖಂಡ	ಶಿಲ್ಪ ಕೆಲ್ಲ
ರಾಜ್ಯವಲಯ									
1.	ಪರೀಕ್ಷಣೆ(ಪ್ರಾಥಮಿಕ) 2202-01-104-0-00-059	0.298	0.298	0.0496	0.0496	0.0496	0.0496	0.0496	0.05
2.	ಸಮವಸ್ತ್ರಗಳ ಸಹಾಣಕಾ ವೆಚ್ಚ 2202-01-109-0-03-422	1.20	1.20	0.20	0.20	0.20	0.20	0.20	0.20
3.	ಪ್ಯೂತ್ತರ ಜಗುಲು 2202-01-800-1-35-059	0.80	0.80	0.00	0.00	0.00	0.00	0.40	0.40
4.	ಪ್ರತಿಭಾಕಾರಂಜ 2202-01-800-1-35-059	4.87	4.87	0.587	1.935 (ಅಧ್ಯ ಮಟ್ಟ ಸಂ)	0.587	0.587	0.587	0.587
5.	ಪಂಚಸೌಲಭ್ಯ ನಗರಪ್ರದೇಶದ ಪ್ರಾ.ಶಾಲೆಗಳಿಗೆ ಶೌಚಾಲಯ/ಕು.ನೀರಿನ ಸೌಲಭ್ಯ 2202-01-800-1-73	2.432	2.432	0.00	0.742	0.00	0.00	0.00	1.69
6.	ಪಂಚಸೌಲಭ್ಯ ನಗರಪ್ರದೇಶದ ಪ್ರೌ.ಶಾಲೆಗಳಿಗೆ ಶೌಚಾಲಯ/ಕು.ನೀರಿನ ಸೌಲಭ್ಯ 2202-01-800-1-73	3.668	3.668	0.00	2.718	0.00	0.95	0.00	0.00
7.	ಕಾರಾ ಬ್ಯಾಗ್ ಮತ್ತು ಸೋಪ್ ಪುಸ್ತಕ 2202-02-800-1-06	68.93	68.93	12.26	11.32	14.84	16.05	4.07	10.39
8.	ಆಡಿ ವಿಶೇಷ ಸಲಹಗಾಗಿ ಅನ್ವೇಷಣ ನೀಡಿಕೆ(ಪ್ರೌಢಶಾಲೆ) 2202-02-800-1-117	2.222	2.222	0.3703	0.3703	0.3703	0.3703	0.3703	0.3705
9.	ಸಮೂಹ ಕಾರಾ ಸಂಕಣ 2202-01-800-1-74-059	8.623	8.623	1.916	1.095	2.053	1.643	.548	1.368
10.	ವಿದ್ಯಾರ್ಥಿವೇತನ ಮತ್ತು ಸೆಮಿನಾರ್‌ಗಳು (ಸಂಸ್ಥೆಗಳ) 2202-06-103-0-05-059	0.03	0.03	0.00	0.04	0.00	0.04	0.00	0.00
	ಒಟ್ಟು	93.123	93.123	15.3829	18.4699	18.8999	19.8899	6.2249	14.8555
1.	ಐ.ಸಿ.ಡಿ. ಫೇಸ್- 1 (ಕೇಂದ್ರ ಅನುದಾನ)	ರಂಗಾಸ್, ಹಣ್ಣಾಪುರ ಸಂಸ್ಥೆಯು 2009ರ ಮೇ ತಿಂಗಳ ಪ್ರಾರಂಭಗೊಳ್ಳುವುದರಿಂದ ಇನ್ನೂ ಯಾವುದೂ ಅನುದಾನ ಬಿಡುಗಡೆಯಾಗಿರುವುದಿಲ್ಲ.							
2.	ಐ.ಸಿ.ಡಿ. ಫೇಸ್-2 (ಕೇಂದ್ರ ಅನುದಾನ)	ರಂಗಾಸ್, ಹಣ್ಣಾಪುರ ಸಂಸ್ಥೆಯು 2009ರ ಮೇ ತಿಂಗಳ ಪ್ರಾರಂಭಗೊಳ್ಳುವುದರಿಂದ ಇನ್ನೂ ಯಾವುದೂ ಅನುದಾನ ಬಿಡುಗಡೆಯಾಗಿರುವುದಿಲ್ಲ.							
3.	ಮಾಹಿತಿಂಧು ಯೋಜನೆ	ರಂಗಾಸ್, ಹಣ್ಣಾಪುರ ಸಂಸ್ಥೆಯು 2009ರ ಮೇ ತಿಂಗಳ ಪ್ರಾರಂಭಗೊಳ್ಳುವುದರಿಂದ ಇನ್ನೂ ಯಾವುದೂ ಅನುದಾನ ಬಿಡುಗಡೆಯಾಗಿರುವುದಿಲ್ಲ.							
1.	ಐ.ಇ.ಡಿ. ಯೋಜನೆ (ಎಸ್.ಎಸ್.ಎ) (ಕೇಂದ್ರ ಅನುದಾನ)	2292296	2292296	307829	481672	460932	393330	177005	441480